ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಎ) ನೀರೆತ್ತುವ ಯಂತ್ರವನ್ನು ಸ್ಥಾಪಿಸಿಲ್ಲ.

ಬಿ) ಉದ್ಭವಿಸುವುದಿಲ್ಲ.

ಭಾರತೀನಗರದಲ್ಲಿ ಸರ್ಕಾರಿ ಕಿರಿಯ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ

೭೦೦ ಶ್ರೀ ಕೆ.ಜೆ. ಜಾರ್ಜ್ (ಭಾರತಿನಗರ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭಾರತಿನಗರ ವಿಧಾನಸಭಾ ಕ್ಷೇತ್ರದಲ್ಲಿ ಪದವಿಪೂರ್ವ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಇಲ್ಲಿ ಸರ್ಕಾರವು ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡುವರೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿ).—

ಅ) ಬಂದಿದೆ.

ಆ) ಅವಶ್ಯಕತೆಯ ಬಗ್ಗೆ ಪ್ರಸ್ತಾವನೆ ತರಿಸಿ ಪರಿಶೀಲಿಸಲಾಗವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಸಾರಿಗೆ ಸಚಿವರ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ನಾನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಶಾಸನದ ೧೬ (೨)ನೇ ಕಾಲಮಿನ ಮೇರೆಗೆ :

ಭಾರತ ತೈಲ ನಿಗಮದವರು ರಾಜ್ಯದ ವಿಮಾನ ನಿಲ್ದಾಣಗಳಲ್ಲಿ ವಿಮಾನಕ್ಕೆ ಇಂಧನ ತುಂಬಿಸುವ ಎಂ.ವೈ.ಡಿ. ೯೨೨೭ ನೇ ಸಂಖ್ಯೆಯ ವಾಹನಕ್ಕೆ ಮೋಟಾರು ವಾಹನಗಳ ತೆರಿಗೆಯಿಂದ ವಿನಾಯಿತಿ ಯನ್ನು ನೀಡುವ ಕ್ರಮಾಂಕ ಬಗ್ಗೆ ಹೊರಡಿಸಲಾದ ದಿನಾಂಕ ೨೭ ನೇ ಜುಲೈ ೮೭ ರ ಅಧಿಸೂಚನೆ ಕ್ರಮಾಂಕ ಎಫ್.ಟಿ.ಡಿ. ೩೯ ಸಿಎಂಟಿ ೮೬ (೧) ಹಾಗೂ

ಆ) ಭಾರತ ತೈಲ ನಿಗಮದವರು ರಾಜ್ಯದಲ್ಲಿನ ವಿಮಾನ ನಿಲ್ದಾಣಗಳ ಇಂಧನವನ್ನು ಭರ್ತಿ ಮಾಡಲು ಉಪಯೋಗಿಸುವ ೧೧ ವಾಹನಗಳಿಗೆ ವಾಹನ ತೆರಿಗೆಯಿಂದ ವಿನಾಯಿತಿಯನ್ನು ಕೊಡುವ ಬಗ್ಗೆ ದಿನಾಂಕ ೨೭ ನೇ ಜುಲೈ ೧೯೮೭ ರಂದು ಹೊರಡಿಸಲಾದ ಕ್ರಮಾಂಕ ಎಫ್‌ಟಿಡಿ ೩೯ ಟಿಎಂಟಿ ೮೬ (೨) ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಮೇಲಿನ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಗಳನ್ನೊಪ್ಪಿಸುವುದು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳ ಹೆಸರಿನ ಮುಂದೆ ಇರುವ ೧೯೮೬ ನೇ ಇಸವಿಯ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕದ ಮೇಲಿನ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಕೆ.ಬಿ. ಶಾಣಪ್ಪ (ಮಾನ್ಯ ಶ್ರೀ ಬಿ.ಎಂ. ಕಿಷ್ಟೇಸ್ವಾಮಿಯವರ ಪರವಾಗಿ).—ಹಿಂದುಳಿದ ವರ್ಗದವರಿಗೆ ಸರ್ಕಾರಿ ಸೇವೆಯಲ್ಲಿರುವ ನೇಮಕಾತಿಯಲ್ಲಿನ ವಿಶೇಷಾತಿ ಬಗ್ಗೆ ಇರುವ ಸಮಿತಿಯ

ಎರಡನೇ ವರದಿಯಲ್ಲಿ ಶಿಫಾರಸ್ಸುಗಳ ಸಂಬಂಧದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮದ ಬಗ್ಗೆ ಐದನೇ ವರದಿಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1987–88ನೇ ಸಾಲಿನ ಪೂರಕ ಅಂದಾಜುಗಳ ಮಂಡನೆ

ಶ್ರೀ ಎ. ಲಕ್ಷ್ಮೀಸಾಗರ್(ಮಾನ್ಯ ಕಾನೂನು ಸಚಿವರು). —ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನ ಮುಂದೆ ಇರತಕ್ಕ ಭಾರತ ಸಂವಿಧಾನದ ೨೦೪ (೧) ನೇ ಅನುಚ್ಛೇದದ ಮೇರೆಗೆ ೧೯೮೭–೮೮ ನೇ ಸಾಲಿನ ಆರ್ಥಿಕ ವರ್ಷದ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸಭೆಗೆ ಒಪ್ಪಿಸಲಾಯಿತು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನ ಮುಂದೆ ಇರತಕ್ಕ ಪೂರಕ ಅಂದಾಜುಗಳನ್ನು ಮಾನ್ಯ ಕಾನೂನು ಸಚಿವರು ಸಭೆಯ ಮುಂದೆ ಮಂಡಿಸಿದರು. ಆದರೆ ನಾವು ಈ ಬಗ್ಗೆ ಚರ್ಚೆ ಮಾಡಬೇಡವೇ ?

ಅಧ್ಯಕ್ಷರು. —ಈಗ ಒಂದು ಪ್ರಕಟಣೆ ಇದೆ. ಆ ಪ್ರಕಟಣೆಯನ್ನು ಓದುತ್ತೇನೆ. ಆಮೇಲೆ ನೋಡೋಣ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

" ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳ ೧೮ ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ಈ ದಿವಸ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ವಿಧಾನ ಸಭೆಯ ಅನುಮೋದನೆಗಾಗಿ ಕಳುಹಿಸುತ್ತಿದ್ದೇನೆ.

೧. ೧೯೮೭ನೇ ಇಸವಿಯ ಪತ್ತಿ ಸಾಗಾಣಿಕೆ (ಕರ್ನಾಟಕ ತಿದ್ದುಪಡಿ) ವಿಧೇಯಕ.

೨. ೧೯೮೭ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯ ಶಿಕ್ಷಕರ (ಹಂಗಾಮಿ ಉಪನ್ಯಾಸಕರ ವಿಲೀನೀಕರಣ) ವಿಧೇಯಕ.

೩. ೧೯೮೭ನೇ ಇಸವಿಯ ಕರ್ನಾಟಕ ವೃಕ್ಷ ಸಂರಕ್ಷಣೆ (ತಿದ್ದುಪಡಿ) ವಿಧೇಯಕ.

ಶ್ರೀ ಯು. ಭೂಪತಿ —ಮಾನ್ಯ ಅಧ್ಯಕ್ಷರೇ, ನಾನು ಒಂದು ಅಡ್ಜರ್ನಮೆಂಟ್ ಮೋಷನ್ ಕಳುಹಿಸಿದ್ದೆ. ಅದೂ ಅಲ್ಲದೆ ನಾನು ಹೋದ ವಾರ ಕೇಳಿದ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ.

MR. SPEAKER.—I have to try my level best.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಯು ಹ್ಯಾವ್ ಟ್ರೈಡ್ ಯುವರ್ ಲೆವೆಲ್ ಬೆಸ್ಟ್. ಎಂದು ಹೇಳಿದಿರಿ. ಉತ್ತರ ತರಿಸಿಕೊಡಬೇಕೆಂದು ನೀವು ಇಷ್ಟು ಹೇಳಿದರೂ ಕೂಡ, ಉತ್ತರ ಬರದೇ ಹೋದರೆ ಅದರ ಅರ್ಥ ಏನು ? ಅನೇಕ ಉತ್ತರಗಳು ಬರಲೇ ಇಲ್ಲ. ಮಂತ್ರಿಗಳು ಬರುವಾಗ ಉತ್ತರಗಳನ್ನು ಜೊತೆಯಲ್ಲಿ ತೆಗೆದುಕೊಂಡು ಬರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕಾಗಿ ಅಡ್ಜರ್ನಮೆಂಟ್ ಮೋಷನ್ ಮಾನ್ಯ ಅಧ್ಯಕ್ಷರೇ, ಉತ್ತರ ಬರದಿದ್ದರೆ ಅದನ್ನು ತರಿಸಿಕೊಡುತ್ತೇವೆ. ಉತ್ತರವನ್ನು ತರಿಸಿ ಕೊಡುವುದು ನಮ್ಮ ಕರ್ತವ್ಯ. ಆದರೆ, ಇವತ್ತಿನವರೆಗೂ ಪ್ರಶ್ನೋತ್ತರ ಸಮಯ ಹನ್ನೆರಡು ಕಾಲು ಆದರೂ ಮುಗಿಯುವುದಿಲ್ಲ. ಉತ್ತರಗಳು ಬರದಿದ್ದರೆ, ಇಷ್ಟು ಸಮಯ ತೆಗೆದುಕೊಳ್ಳುವುದಕ್ಕೆ ಆಗುತ್ತಿತ್ತೇ ? ಉತ್ತರ ಬರದೇ ಕಾರ್ಯಕಲಾಪ ನಿಂತಿದೆಯೆಂದು ಯಾರು ಹೇಳಿಲ್ಲ.